**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಸಿಜೆಎಂ, ಧಾರವಾಡ</u>**

**<u>ಸಿಸಿ ನಂ. 170/2025</u>**

ಫಿರ್ಯಾದುದಾರಃ ಕರ್ನಾಟಕ ರಾಜ್ಯ ಪರವಾಗಿ ಧಾರವಾಡ ಸಂಚಾರ ನಿಯಂತ್ರಣ ಪೋಲಿಸರು.

**ವಿರುದ್ಧ**

ಆರೋಪಿಃ 1) ಉದ್ದಪ್ಪ ಹೊನಕುಪ್ಪಿ , ವಯಾಃ 36 ವರ್ಷ
ಸಾಃ ಸತ್ತಿಗೇರಿ , ತಾಃ ಯರಗಟ್ಟಿ , ಜಿಃ ಬೆಳಗಾವಿ

**<u>ಆರೋಪಿಯ ಹೇಳಿಕೆ ಕಲಂ 313 ದಂ.ಪ್ರ.ಸಂ ಅಡಿಯಲ್ಲಿ</u>**

**ಪ್ರಶ್ನೆ 1)** ಈ ಪ್ರಕರಣದಲ್ಲಿ ಅಭಿಯೋಜನೆ ಪರ ಪರೀಕ್ಷಿಸಲ್ಪಟ್ಟ ಸಾಕ್ಷಿದಾರರಾದ ಚನ್ನಬಸಪ್ಪ ಮಾಳಗಿ , ದೇವೇಂದ್ರಪ್ಪ ಬೆವಿನಗಿಡದ , ಸಿದ್ದಪ್ಪ ಮಾದರ , ಶಿವಾನಂದ ಹುಲಿಗೆಪ್ಪನವರ , ರೇಣುಕಾ ಹಂಚಿನಮನಿ , ತಿಪ್ಪಣ್ಣ ಕಾಂಬಳೆ , ಮಂಜುನಾಥ ಹಂಚಿನಮನಿ , ಕರೆಪ್ಪ ಹಂಚಿನಮನಿ, ಶ್ರೀನಿವಾಸ ಮೇಟಿ ಇವರು ಕೊಟ್ಟಂತಹ ಸಾಕ್ಷಿಯನ್ನು ಕೇಳಿದ್ದೀರಾ?
**ಉತ್ತರಃ**

**ಪ್ರಶ್ನೆ 2)** ಅಸಾ.1 ಚನ್ನಬಸಪ್ಪ ಮಾಳಗಿ ಇವರು ತಮ್ಮ ಸಾಕ್ಷ್ಯದಲ್ಲಿ" ದಿಃ 20.10.2024 ಬೆಳಗ್ಗೆ ತಾನು ಮನೆಯ ಮುಂದೆ ನಿಂತಾಗ ಮರಿಯವ್ವ , ಆಕೆಯ ಸೊಸೆ ರೇಣುಕಾ , ಮಕ್ಕಳಾದ ಪ್ರಣವ ಮತ್ತು ಪೃಥ್ವಿರವರು ಬ್ಯಾಡಗಿಗೆ ಹೋಗುತ್ತೆವೆ ಎಂದು ರಮೇಶ ಹಂಚಿನಮನಿ ಇತನ ರಿಕ್ಷಾ ನಂಃ ಕೆಎ-25/ಡಿ-3725 ಇದರಲ್ಲಿ ಹತ್ತಿರ ರೈಲ್ವೆ ಸ್ಟೇಶನ್ ಗೆ ಹೋದರು " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?
**ಉತ್ತರಃ**

**ಪ್ರಶ್ನೆ 3)** ಇದೇ ಸಾಕ್ಷಿ ಮುಂದುವರೆದು " ಸ್ವಲ್ಪ ಸಮಯದ ನಂತರ ರೇಣುಕಾ ಇವರು ದೂರವಾಣಿಯಲ್ಲಿ ಸಂಪರ್ಕಿಸಿ ಅಪಘಾತವಾದ ಬಗ್ಗೆ ಹೇಳಿದರು ಎಂದರೆ ಸರಿ . ನಾನು ಅಪಘಾತ ಸ್ಥಳಕ್ಕೆ ಹೋದಾಗ ರೇಣುಕಾ ಇವರನ್ನು ನಾನು ವಿಚಾರಿಸಿದಾಗ ಅವರು ರಿಕ್ಷಾದಲ್ಲಿ ಹೋಗುತ್ತಿರುವಾಗ ಎದುರುಗಡೆ ಅಂದರೆ ಜರ್ಮನ ಸರ್ಕಲ ಕಡೆಯಿಂದ ಕೇಲಗೇರಿ ಕಡೆ ಒಬ್ಬ ಲಾರಿ ಚಾಲಕನು ಅತೀ ವೇಗವಾಗಿ ಮತ್ತು ಅಜಾರೂಕತೆಯಿಂದ ಚಲಾಯಿಸಿಕೊಂಡು ಬಂದು ರಿಕ್ಷಾಕ್ಕೆ ಡಿಕ್ಕಿಪಡಿಸಿದನು ಎಂದು ಹೇಳಿದರು " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ?
**ಉತ್ತರಃ**

**ಪ್ರಶ್ನೆ 4)** ಇದೇ ಸಾಕ್ಷಿ ಮುಂದುವರೆದು " ಅಪಘಾತದ ರಭಸಕ್ಕೆ ರಿಕ್ಷಾ ಪಲ್ಟಿಯಾಗಿ ಅದರಲ್ಲಿದ್ದ ಎಲ್ಲರೂ ಹೊರಗೆ ಬಿದ್ದರು ಮತ್ತು ರಮೇಶ ಹಂಚಿನಮನಿ ಸ್ಥಳದಲ್ಲಿಯೇ

ಮರಣ ಹೊಂದರು , ರೇಣುಕಾ ಮತ್ತು ಪ್ರಣವಗೆ ದೇಹದ ವಿವಿಧ ಭಾಗಗಳಿಗೆ ಬಲವಾದ ಪೆಟ್ಟಾಯಿತು . ಪ್ರಣವ ಇವರ ಒಂದು ಕಾಲು ತುಂಡಾಗಿತ್ತು ಮತ್ತು ಪೃಥ್ವಿ ಇವರಿಗೆ ತಲೆಗೆ ಗಾಯವಾಗಿತ್ತು " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ?
**ಉತ್ತರಃ**

**ಪ್ರಶ್ನೆ 5)** ಇದೇ ಸಾಕ್ಷಿ ಮುಂದುವರೆದು " ಅಪಘಾತಪಡಿಸಿದ ಲಾರಿ ಚಾಲಕನು ತನ್ನ ವಾಹನವನ್ನು ಸ್ಥಳದಲ್ಲಿಯೇ ನಿಲ್ಲಿಸಿ ಅಲ್ಲಿಂದ ಪರಾರಿಯಾಗಿದ್ದನು ಸದರಿ ಲಾರಿ ನಂಬರ ನೋಡಲಾಗಿ ಜಿಎ-06/ಟಿ-9097 ಎಂಬುದಾಗಿ ಇತ್ತು " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ?
**ಉತ್ತರಃ**

**ಪ್ರಶ್ನೆ 6)** ಇದೇ ಸಾಕ್ಷಿ ಮುಂದುವರೆದು " ಗಾಯಾಳು ಪೃಥ್ವಿ ರವಿ ಹಂಚಿನಮನಿ ಇತನು ಕಿಮ್ಸ ಆಸ್ಪತ್ರೆಯಲ್ಲಿ ಮರಣ ಹೊಂದಿದ ಬಗ್ಗೆ , ಗಾಯಾಳು ಪ್ರಣವ ಇತನು ಕಿಮ್ಸ ಆಸ್ಪತ್ರೆಯಲ್ಲಿ ಮರಣ ಹೊಂದಿದ ಬಗ್ಗೆ ಗೊತ್ತಾಗಿ ದೂರು ನಂತರ ಮರು ಹೇಳಿಕೆ ನೀಡಿರುವುದಾಗಿ " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ?
**ಉತ್ತರಃ**

**ಪ್ರಶ್ನೆ 7)** ಇದೇ ಸಾಕ್ಷಿ ಮುಂದುವರೆದು " ದೂರು ದಾಖಲಿಸಿದ ನಂತರ ಅದೇ ದಿನ ಪೊಲಿಸರು ಅಪಘಾತ ಸ್ಥಳಕ್ಕೆ ತನ್ನನ್ನು ಕರೆದು ತನ್ನ ಸಮಕ್ಷಮ ಸ್ಥಳ ಪಂಚನಾಮೆ ಮಾಡಿದರು " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ?
**ಉತ್ತರಃ**

**ಪ್ರಶ್ನೆ 8)** ಆಸಾ.2 ದೇವೆಂದ್ರಪ್ಪ ಬೆವಿನಗಿಡದ ಹಾಗೂ ಚಾಸಾ-3 ಸಿದ್ದಪ್ಪ ಮಾದರ ಇವರು ತಮ್ಮ ಸಾಕ್ಷ್ಯದಲ್ಲಿ " ಒಂದು ವರ್ಷದ ಹಿಂದೆ ಪೊಲಿಸರು ತಮ್ಮನ್ನು ಸಂಪಿಗೆ ನಗರದ ಬಸ್ ಸ್ಟಾಪ್ ಬಳಿ ಹಾಗೂ ಸಂಚಾರಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಕೆಲವು ದಾಖಲೆಗಳಿಗೆ ಸಹಿ ಪಡೆದು ಪೋಟೋ ತೆಗೆಸಿದರು " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?
**ಉತ್ತರಃ**

**ಪ್ರಶ್ನೆ 9)** ಆಸಾ.5 ರೇಣುಕಾ ಹಂಚಿನಮನಿ ಇವರು ತಮ್ಮ ಸಾಕ್ಷ್ಯದಲ್ಲಿ " ದಿಃ 20.10.2024 ರಂದು ಬೆಳಗ್ಗೆ ತಾನು ತನ್ನ ಮಕ್ಕಳಾದ ಪ್ರಣವ , ಪೃಥ್ವಿ ಮತ್ತು ಅತ್ತೆ ಮರೆವ್ವ ಇವರ ಜೊತೆ ತನ್ನ ಮೈದುನ ರಮೇಶ ನಮ್ಮ ರಿಕ್ಷಾ ನಂಃ ಕೆಎ-25/ಡಿ-3725 ನಲ್ಲಿ ಬ್ಯಾಡಗಿಗೆ ಹೋಗಲು ಧಾರವಾಡದ ರೈಲ್ವೆ ಸ್ಟೇಶನ್ ಗೆ ಹೊರಟಾಗ ಸಂಪಿಗೆ ನಗರದ ಬಳಿ ಹೋಗುತ್ತಿರುವಾಗ ತಮ್ಮ ರಿಕ್ಷಾಕ್ಕೆ ಎದುರಾಗಿ ಜರ್ಮನ್ ಆಸ್ಪತ್ರೆ ಕಡೆಯಿಂದ ಒಂದು ಲಾರಿ ವೇಗವಾಗಿ ಬಂದು ತಮ್ಮ ರಿಕ್ಷಾಕ್ಕೆ ಗುದ್ದಿತು . ಪರಿಣಾಮ ತಮ್ಮ ರಿಕ್ಷಾ ಪಲ್ಟಿಯಾಯಿತು " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ?
**ಉತ್ತರಃ**

ಸಿಸಿ ನಂ. 170/2025

**ಪ್ರಶ್ನೆ 10)** ಇದೇ ಸಾಕ್ಷಿ ಮುಂದುವರೆದು " ನನ್ನ ಮೈದುನ ರಮೇಶ ಇವರ ತಲೆಯ ಮೇಲೆ ಲಾರಿಯ ಚಕ್ರ ಹರಿಯಿತು . ನನ್ನ ಅತ್ತೆ ಮರೆವ್ವ ಇವರಿಗೆ ತಲೆಗೆ ಪೆಟ್ಟಾಗಿ ಅವರು ಸ್ಥಳದಲ್ಲಿಯೇ ಮರಣ ಹೊಂದರು . ಅಪಘಾತದ ಪರಿಣಾಮ ನನ್ನ ತಲೆಗೆ , ಕಾಲಿಗೆ , ಎದೆಗೆ ಪೆಟ್ಟಾಯಿತು . ಪ್ರಣವ ಇವರ ಕೈ , ಕಾಲು ಮತ್ತು ನಡಕ್ಕೆ ಪೆಟ್ಟಾಗಿ ಅವನ ಬಲಗಾಲು ತುಂಡಾಯಿತು . ಪೃಥ್ವಿಗೆ ತಲೆಗೆ ಬಲವಾದ ಪೆಟ್ಟಾಯಿತು . " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆ 11)** ಇದೇ ಸಾಕ್ಷಿ ಮುಂದುವರೆದು " ಅಪಘಾತಪಡಿಸಿದ ಟ್ರಕನ ನಂಬರ ಜಿಎ-06/ಟಿ-9097 ಅಂತ ಇತ್ತು . ಲಾರಿ ಚಾಲಕನು ಅಲ್ಲಿಂದ ಪರಾರಿಯಾದನು . ಆಗ ಸದರಿ ವಿಷಯವನ್ನು ಚಾಸಾ-1 ಚನ್ನಬಸಪ್ಪ ರವರಿಗೆ ದೂರವಾಣಿಯಲ್ಲಿ ಮಾಹಿತಿ ನೀಡಿದೆವು . " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆ 12)** ಇದೇ ಸಾಕ್ಷಿ ಮುಂದುವರೆದು " ನಂತರ ಅಂಬುಲೆನ್ಸ ತರಿಸಿ ಧಾರವಾಡದ ಸಿವಿಲ್ ಆಸ್ಪತ್ರೆಗೆ ಎಲ್ಲಾ ಗಾಯಾಳುಗಳನ್ನು ಮತ್ತು ಮೃತರ ಶವಗಳನ್ನು ತೆಗೆದುಕೊಂಡು ಹೋದೆವು . ಅಪಘಾತವಾದಾಗ ಸಮಯ ಬೆಃ 4.45 ಗಂಟೆ ಆಗಿತ್ತು . ತನ್ನ ಮಗ ಪ್ರಣವ ಧಾರವಾಡದ ಸಿವಿಲ್ ಆಸ್ಪತ್ರೆಯಲ್ಲಿ ಮರಣ ಹೊಂದನು . ಈ ಬಗ್ಗೆ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಯಲ್ಲಿ ದಾಖಲಾಗಿರುವಾಗ ಹೇಳಿಕೆ ಕೊಟ್ಟಿದ್ದೆನೆ . " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆ 13)** ಇದೇ ಸಾಕ್ಷಿ ಮುಂದುವರೆದು " ದಿಃ 21.10.2024 ರಂದು ತಾನು ಕಿಮ್ಸ ಆಸ್ಪತ್ರೆಯಲ್ಲಿದ್ದಾಗ ಪೊಲಿಸರು ಒಬ್ಬ ವ್ಯಕ್ತಿಯನ್ನು ಕರೆದುಕೊಂಡು ಬಂದು ತೊರಿಸಿ ಅತನ ಹೆಸರು ಉದ್ದಪ್ಪ ವಿಠಲ ಹೊಳೆಯನಕೊಪ್ಪಿ ಎಂದು ತಿಳಿಸಿದರು ಆ ವ್ಯಕ್ತಿ ನೀವೇ ಆಗಿದ್ದಿರಿ ಎಂದು ಗುರುತಿಸಿರುತ್ತಾರೆ " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆ 14)** ಇದೇ ಸಾಕ್ಷಿ ಮುಂದುವರೆದು " ನೀವು ನಿಮ್ಮ ಟ್ರಕನ್ನು ಜರ್ಮನ ಆಸ್ಪತ್ರೆ ಕಡೆಯಿಂದ ಕೇಲಗೇರಿ ಕಡೆ ಅತೀ ವೇಗವಾಗಿ ಮತ್ತು ಅಜಾರೂಕತೆಯಿಂದ ಚಲಾಯಿಸಿಕೊಂಡು ಬಂದು ತಾವು ಪ್ರಯಾಣಿಸುತ್ತಿದ್ದ ರಿಕ್ಷಾಕ್ಕೆ ಡಿಕ್ಕಿಪಡಿಸಿರುವುದಾಗಿ " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆ 15)** ಇದೇ ಸಾಕ್ಷಿ ಮುಂದುವರೆದು " ದಿಃ 28.10.2024 ರಂದು ತನ್ನ ಮಗ ಪೃಥ್ವಿ ಅಪಘಾತದ ಪರಿಣಾಮ ಆಗಿರುವ ಗಾಯಗಳಿಂದ ಚೇತರಿಸಿಕೊಳ್ಳದೇ ಮೃತಪಟ್ಟನು " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ?
**ಉತ್ತರಃ**

**ಪ್ರಶ್ನೆ 16)** ಆಸಾ-6 ತಿಪ್ಪಣ್ಣ ಕಾಂಬಳೆ ಇವರು ತಮ್ಮ ಸಾಕ್ಷ್ಯದಲ್ಲಿ " ದಿಃ 20.10.2024 ರಂದು ಬೆಳಗ್ಗೆ ತಾನು ಕೇಲಗೇರಿಯಿಂದ ಜುಬ್ಲಿ ಸರ್ಕಲ ಕಡೆಗೆ ಕಾರಿನಲ್ಲಿ ಹೊರಟಾಗ ಕೆಲಗೇರಿ ಸಂಪಿಗೆ ನಗರದ ಬಸ್ ಸ್ಟಾಪ ಬಳಿ ಟ್ರಕ್ ನಂಃ ಜಿಎ-06/ಟಿ-9097 ಇದರ ಚಾಲಕನು ತನ್ನ ವಾಹನದ ಪೊಕಸ್ ಲೈಟನ್ನು ಹಾಕಿಕೊಂಡು ಜರ್ಮನ್ ಆಸ್ಪತ್ರೆ ಕಡೆಯಿಂದ ಕೇಲಗೇರಿ ಕಡೆ ಅತೀ ವೇಗವಾಗಿ ಮತ್ತು ಅಜಾರೂಕತೆಯಿಂದ ಚಲಾಯಿಸಿಕೊಂಡು ಬಂದು ರಿಕ್ಷಾ ನಂಃಕೆಎ-25/ಡಿ-3725 ಕ್ಕೆ ಡಿಕ್ಕಿಹೊಡೆಯಿತು . " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ?
**ಉತ್ತರಃ**

**ಪ್ರಶ್ನೆ 17)** ಇದೇ ಸಾಕ್ಷಿ ಮುಂದುವರೆದು " ಅಪಘಾತದ ರಭಸಕ್ಕೆ ರಿಕ್ಷಾ ಪಲ್ಟಿಯಾಯಿತು , ಅದರಲ್ಲಿದ್ದ ಗಾಯಾಳು ಮಹಿಳೆ ವಿಚಾರಿಸಿದಾಗ ತನ್ನ ಹೆಸರು ರೇಣುಕಾ ಎಂದು ಮತ್ತು ಗಾಯಗೊಂಡ ಮಕ್ಕಳ ಹೆಸರು ಪ್ರಣವ ಮತ್ತು ಪೃಥ್ವಿ ಎಂದು ಸ್ಥಳದಲ್ಲಿಯೇ ಮರಣ ಹೊಂದಿದ ವ್ಯಕ್ತಿಯ ಹೆಸರು ರಮೇಶ ಹಾಗೂ ಮಹಿಳೆಯ ಹೆಸರು ಮರೆವ್ವ ಎಂದು ಹೇಳಿದರು " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ?
**ಉತ್ತರಃ**

**ಪ್ರಶ್ನೆ 18)** ಇದೇ ಸಾಕ್ಷಿ ಮುಂದುವರೆದು " ಪ್ರಣವ ಎನ್ನುವವನು ಅಪಘಾತದ ದಿನವೇ ಆಸ್ಪತ್ರೆಯಲ್ಲಿ ಮರಣ ಹೊಂದ ಬಗ್ಗೆ ತಿಳಿಯಿತು ಮತ್ತು ಪೃಥ್ವಿ ಎನ್ನುವವನು ದಿಃ 28.10.2024 ರಂದು ಮರಣ ಹೊಂದ ಬಗ್ಗೆ ತಿಳಿಯಿತು " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ?
**ಉತ್ತರಃ**

**ಪ್ರಶ್ನೆ 19)** ಇದೇ ಸಾಕ್ಷಿ ಮುಂದುವರೆದು " ದಿಃ 21.10.2024 ರಂದು ಪೊಲಿಸರು ತನ್ನನ್ನು ಪೊಲೀಸ್ ಠಾಣೆಗೆ ಕರೆಯಿಸಿ ಒಬ್ಬ ವ್ಯಕ್ತಿಯನ್ನು ತೊರಿಸಿ ಅಪಘಾತದ ದಿನ ಲಾರಿಯನ್ನು ಚಲಾಯಿಸುತ್ತಿದ್ದ ವ್ಯಕ್ತಿ ಇವನೇನಾ ಎಂದು ಗುರುತಿಸಲು ಹೇಳಿದರು . ತಾನು ಆತನನ್ನು ನೋಡಿ ಗುರುತಿಸಿದ್ದೆನೆ . ತಾನು ಆ ದಿನ ನೋಡಿ ಗುರುತಿಸಿದ ಮತ್ತು ಲಾರಿ ಚಲಾಯಿಸಿದ ವ್ಯಕ್ತಿ ನೀವೇ ಆಗಿದ್ದಿರಿ " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ?
**ಉತ್ತರಃ**

**ಪ್ರಶ್ನೆ 20)** ಆಸಾ-7 ಮಂಜುನಾಥ ಹಂಚಿನಮನಿ ಮತ್ತು ಚಾಸಾ-8 ಕರೆಪ್ಪ ಹಂಚಿನಮನಿ ಇವರು ತಮ್ಮ ಸಾಕ್ಷ್ಯದಲ್ಲಿ " 1 ವರ್ಷದ ಹಿಂದೆ ತಾವು ಮನೆಯಲ್ಲಿರುವಾಗ ಕೇಲಗೇರಿಯ

ಸಂಪಿಗೆ ನಗರದ ಮೋರ್ ಮಾಲ್ ಬಳಿ ಅಪಘಾತವಾಗಿರುವುದಾಗಿ ಚಾಸಾ-1 ಚನ್ನಬಸಪ್ಪ ಮಾಳಗಿರವರು ದೂರವಾಣಿಯಲ್ಲಿ ಮಾಹಿತಿ ನೀಡಿದರು . " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆ 21)** ಇದೇ ಸಾಕ್ಷಿ ಮುಂದುವರೆದು " ನಂತರ ತಾವು ಅಪಘಾತ ಸ್ಥಳಕ್ಕೆ ಹೊಗಿ ನೋಡಲಾಗಿ ರಮೇಶ ಮತ್ತು ಮರೆವ್ವ ಸ್ಥಳದಲ್ಲಿ ಮರಣ ಹೊಂದಿದ್ದರು . ರೇಣುಕಾ ಮತ್ತು ಅವರ ಮಕ್ಕಳಿಗೆ ಭಾರಿ ಗಾಯಗಳು ಆಗಿದ್ದವು . " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆ 22)** ಇದೇ ಸಾಕ್ಷಿ ಮುಂದುವರೆದು " ನಂತರ ಗಾಯಾಳುಗಳನ್ನು ಧಾರವಾಡದ ಸಿವಿಲ್ ಆಸ್ಪತ್ರೆಗೆ ದಾಖಲಿಸಿ ನಂತರ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ದಾಖಲು ಮಾಡಿದೆವು ಹಾಗೂ ಅದೇ ದಿನ ಬೆಳಗ್ಗೆ ಕಿಮ್ಸ ಆಸ್ಪತ್ರೆಯಲ್ಲಿ ಪ್ರಣವ ಅಸುನಿಗಿದರು ಮತ್ತು ದಿಃ 28-10-2024 ರಂದು ಇನ್ನೊಬ್ಬ ಗಾಯಾಳು ಪ್ರಥ್ವಿ ಇತನು ಮರಣ ಹೊಂದನು " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆ 23)** ಆಸಾ-8 ಶ್ರೀನಿವಾಸ ಮೇಟಿ ಇವರು ತಮ್ಮ ಸಾಕ್ಷ್ಯದಲ್ಲಿ " ದಿಃ 20-10-2024 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ಚನ್ನಬಸಪ್ಪ ಇವರ ಠಾಣೆಗೆ ಹಾಜರಾಗಿ ಒಂದು ಕಂಪ್ಯೂಟರ ಬೆರಳಚ್ಚು ಮಾಡಿದ ದೂರನ್ನು ನೀಡಿ ಪ್ರಕರಣ ದಾಖಲಿಸಿದೆನು " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?

**ಉತ್ತರಃ**

**ಪ್ರಶ್ನೆ 24)** ಇದೇ ಸಾಕ್ಷಿ ಮುಂದುವರೆದು " ಅದೇ ದಿನ ಚಾಸಾ-1 ಚನ್ನಬಸಪ್ಪ ರವರನ್ನು ಕರೆದುಕೊಂಡು ಹೋಗಿ ಸ್ಥಳದಲ್ಲಿ ಚಾಸಾ-2 ದೇವೇಂದ್ರಪ್ಪ ಮತ್ತು 3 ಸಿದ್ದಪ್ಪರವರನ್ನು ಕರೆಯಿಸಿ ಅವರಿಗೆ ಮಾಹಿತಿ ನೀಡಿ ನೋಟಿಸ ಕೊಟ್ಟು ಸ್ಥಳ ಪಂಚನಾಮೆ ಮಾಡಿ ಪೋಟೋ ತೆಗೆಸಿದೆನು " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆ 25)** ಇದೇ ಸಾಕ್ಷಿ ಮುಂದುವರೆದು " ಅದೇ ವೇಳೆಗೆ ಅಪಘಾತ ಸ್ಥಳದಲ್ಲಿ ಇದ್ದ ಆಟೋ ರಿಕ್ಷಾದ ಮುಂದಿನ ಗ್ಲಾಸಿನ ರಬ್ಬರ್ ಮತ್ತು ಲಾರಿಯ ಸ್ಟೀಲಿನ ಗುಂಡು ಸ್ಥಳದಲ್ಲಿ ಬಿದಿದ್ದು ಅವುಗಳನ್ನು ವಶಕ್ಕೆ ಪಡೆದೆನು " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?

**ಉತ್ತರಃ**

**ಪ್ರಶ್ನೆ 26)** ಇದೇ ಸಾಕ್ಷಿ ಮುಂದುವರೆದು " ನಾನು ಅಪಘಾತ ಸ್ಥಳದಲ್ಲಿ ಸ್ಥಳ ತನಿಖೆ ಮಾಡುತ್ತಿರುವ ಸಮಯದಲ್ಲಿ ಅಪಘಾತದಲ್ಲಿ ಗಾಯಗೊಂಡಿದ್ದ ಪ್ರಣವ ಹಂಚಿನಮನಿ

ಇವರು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಮರಣ ಹೊಂದಿರುವುದಾಗಿ ಠಾಣಾಧಿಕಾರಿಯು ಮಾಹಿತಿ ನೀಡಿದರು . " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?
**ಉತ್ತರಃ**

**ಪ್ರಶ್ನೆ 27)** ಇದೇ ಸಾಕ್ಷಿ ಮುಂದುವರೆದು " ನಂತರ ಚಾಸಾ-29 ಎಸ್ ಎ ಗೌರಿಮಠ ರವರಿಗೆ ಒಂದು ಜ್ಞಾಪನಾ ಕೊಟ್ಟು ಮೃತರ ಶವ ಪಂಚನಾಮೆ ಮಾಡಿ ನಂತರ ವರದಿ ಮಾಡುವಂತೆ ತಿಳಿಸಿದೆನು ಆ ಪ್ರಕಾರ ಸದರಿಯವರು ಕ್ರಮ ಕೈಗೊಂಡು ತನಗೆ ವರದಿ ಮಾಡಿದರು " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?
**ಉತ್ತರಃ**

**ಪ್ರಶ್ನೆ 28)** ಇದೇ ಸಾಕ್ಷಿ ಮುಂದುವರೆದು " ನಂತರ ತನಿಖೆ ಮುಂದುವೆಸಿ ಜಿಲ್ಲಾ ಆಸ್ಪತ್ರೆಗೆ ಬೇಟಿ ನೀಡಿ ಮೃತ ರಮೇಶ ಹಂಚಿನಮನಿ ಇವರ ಶವ ಪಂಚನಾಮೆಯನ್ನು ಪಂಚರಾದ ಚಾಸಾ-2 ಮತ್ತು 3 ರವರಿಗೆ ನೋಟಿಸ ನೀಡಿ ಶವ ಪಂಚನಾಮೆ ಮಾಡಿ ಪೋಟೋ ತೆಗೆಯಿಸಿದೆನು . " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?
**ಉತ್ತರಃ**

**ಪ್ರಶ್ನೆ 29)** ಇದೇ ಸಾಕ್ಷಿ ಮುಂದುವರೆದು "ತನಿಖೆ ಮುಂದುವೆಸಿ ಜಿಲ್ಲಾಆಸ್ಪತ್ರೆಯ ಶವಾಗಾರದಲ್ಲಿದ್ದ ಮೃತ ಮರೆವ್ವ ನಿಂಗಪ್ಪ ಹಂಚಿನಮನಿ ಇವರ ಶವ ಪಂಚನಾಮೆಯನ್ನು ಪಂಚರಾದ ಚಾಸಾ-2 ರಿಂದ 4 ರವರ ಸಮಕ್ಷಮ ನೋಟಿಸ ನೀಡಿ ಶವ ಪಂಚನಾಮೆ ಮಾಡಿ ಪೋಟೋ ತೆಗೆಯಿಸಿದೆನು . " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?
**ಉತ್ತರಃ**

**ಪ್ರಶ್ನೆ 30)** ಇದೇ ಸಾಕ್ಷಿ ಮುಂದುವರೆದು " ನಂತರ ಚಾಸಾ-18 ಎಸ್ ಸಿ ಹುಗ್ಗಿ ರವರಿಗೆ ನೋಟಿಸ ನೀಡಿ ಅಪಘಾತಕ್ಕೆ ಒಳಗಾದ ಮತ್ತು ಕಾರಣವಾದ ವಾಹನಗಳನ್ನು ಹಾಜರುಪಡಿಸುವಂತೆ ಜ್ಞಾಪನಾ ನೀಡಿದೆನು . " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?
**ಉತ್ತರಃ**

**ಪ್ರಶ್ನೆ 31)** ಇದೇ ಸಾಕ್ಷಿ ಮುಂದುವರೆದು " ಆ ಪ್ರಕಾರ ಚಾಸಾ-18 ರವರು ಅದೇ ದಿನ ಅಪಘಾತಕ್ಕೆ ಒಳಗಾದ ರಿಕ್ಷಾ ನಂಃ ಕೆಎ-25/ಡಿ-3725 ಅನ್ನು ಚಾಸಾ-2 ಮತ್ತು 3 ರವರಿಗೆ ನೋಟಿಸ ನೀಡಿ ಜಪ್ತಿ ಪಂಚನಾಮೆ ಮಾಡಿ ಪೋಟೋ ತೆಗೆಯಿಸಿದೆನು . " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?
**ಉತ್ತರಃ**

**ಪ್ರಶ್ನೆ 32)** ಇದೇ ಸಾಕ್ಷಿ ಮುಂದುವರೆದು " ನಂತರ ಠಾಣೆ ಬಳಿ ಇರುವ ವಿವೇಕಾನಂದ ಸರ್ಕಲ ಬಳಿ ಸದರಿ ಪಂಚರೊಂದಿಗೆ ಹೋಗಿ ಅಲ್ಲಿ ಚಾಸಾ-18 ರವರು ಹಾಜರುಪಡಿಸಿದ ಲಾರಿ ನಂಃ ಜಿ-06/ಟಿ-9097 ಅನ್ನು ಚಾಸಾ-2 ಮತ್ತು 3 ರವರಿಗೆ ನೋಟಿಸ ನೀಡಿ ಜಪ್ತಿ ಪಂಚನಾಮೆ ಮಾಡಿ ಪೋಟೋ ತೆಗೆಯಿಸಿದೆನು " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?
**ಉತ್ತರಃ**

**ಪ್ರಶ್ನೆ 33)** ಇದೇ ಸಾಕ್ಷಿ ಮುಂದುವರೆದು " ವಶಪಡಿಸಿಕೊಂಡ ವಾಹನಗಳನ್ನು ಮತ್ತು ಮುದ್ದೆ ಮಾಲುಗಳನ್ನು ಸ್ವತ್ತು ಪಟ್ಟಿಯಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ನಿವೇಧಿಸಿಕೊಂಡೆನು . " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?
**ಉತ್ತರಃ**

**ಪ್ರಶ್ನೆ 34)** ಇದೇ ಸಾಕ್ಷಿ ಮುಂದುವರೆದು " ಅಪಘಾತಕ್ಕೆ ಒಳಗಾದ ಮತ್ತು ಕಾರಣವಾದ ವಾಹನಗಳನ್ನು ಪರೀಕ್ಷಿಸಿ ವರದಿ ನೀಡುವಂತೆ ಸಾರಿಗೆ ಇಲಾಖೆಗೆ ಪತ್ರ ಬರೆದೆನು " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?
**ಉತ್ತರಃ**

**ಪ್ರಶ್ನೆ 35)** ಇದೇ ಸಾಕ್ಷಿ ಮುಂದುವರೆದು " ಅದೇ ದಿನ ಚಾಸಾ-29 ಎಸ್ ಎ ಗೌರಿಮಠ ರವರು ಠಾಣೆಗೆ ಬಂದು ಮೃತ ಪ್ರಣವ ಇವರ ಶವ ಪಂಚನಾಮೆ ಹಾಗೂ ಚಾಸಾ-14 ನಾಗೇಶ ರವರ ಹೇಳಿಕೆಯೊಂದಿಗೆ ವರದಿ ಮಾಡಿಕೊಂಡರು . " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?
**ಉತ್ತರಃ**

**ಪ್ರಶ್ನೆ 36)** ಇದೇ ಸಾಕ್ಷಿ ಮುಂದುವರೆದು " ದಿಃ 21.10.2024 ರಂದು ಉದ್ದಪ್ಪ ಹೊಣಕೊಪ್ಪ ತನ್ನ ಮುಂದೆ ಹಾಜರಾಗಿದ್ದು ಅವರನ್ನು ವಿಚಾರಣೆಗೆ ಒಳಪಡಿಸಿ ಚಾಸಾ-1 , 10 ಹಾಗೂ 11 ರವರನ್ನು ಠಾಣೆಗೆ ಕರೆಯಿಸಿದ ಸದರಿಯವರಿಗೆ ಆರೋಪಿಯನ್ನು ತೋರಿಸಿ ಅವರು ಗುರುತಿಸಿದ ಕುರಿತು ಮರು ಹೇಳಿಕೆ ದಾಖಲಿಸಿಕೊಂಡೆನು ." ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?
**ಉತ್ತರಃ**

**ಪ್ರಶ್ನೆ 37)** ಇದೇ ಸಾಕ್ಷಿ ಮುಂದುವರೆದು " ಆರೋಪಿಯನ್ನು ಸಿಬ್ಬಂದಿಯ ಜೊತೆ ಅವನ ರಕ್ತದ ಮಾದರಿ ಪಡೆಯಲು ಧಾರವಾಡ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿದೆನು . " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?
**ಉತ್ತರಃ**

**ಪ್ರಶ್ನೆ 38)** ಇದೇ ಸಾಕ್ಷಿ ಮುಂದುವರೆದು " ನಂತರ ಆರೋಪಿಯನ್ನು ದಸ್ತಗಿರಿ ಮಾಡಿ , ದಸ್ತಗಿರಿ ನಿಯಮ ಪಾಲಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದೆನು . " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?

**ಉತ್ತರಃ**

**ವಪ್ರಶ್ನೆ 39)** ಇದೇ ಸಾಕ್ಷಿ ಮುಂದುವರೆದು " ಅದೇ ದಿನ ಚಾಸಾ-16 ಶಾಂತವ್ವ ರವರು ಠಾಣೆಗೆ ಹಾಜರಾಗಿದ್ದು ಅವರಿಗೆ ಮೋಟಾರು ವಾಹನ ಕಾಯ್ದೆ ಕಲಂ 133 ರನ್ವಯ ನೋಟಿಸ ನೀಡಿ , ಉತ್ತರ ಹಾಗೂ ವಾಹನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪಡೆದು ಸದರಿಯವರ ವಶಕ್ಕೆ ಬಿಟ್ಟುಕೊಟ್ಟೆನು . " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆ 40)** ಇದೇ ಸಾಕ್ಷಿ ಮುಂದುವರೆದು " ಅದಕ್ಕೆ ಪ್ರತಿಯಾಗಿ ನೀಡಿದ ಉತ್ತರ ಪಡೆದುಕೊಂಡು ಅದರ ಜೊತೆ ಹಾಜರುಪಡಿಸಿದ ದಾಖಲೆಗಳನ್ನು ಕಡತಕ್ಕೆ ಅಳವಡಿಸಿದೆನು . " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?

**ಉತ್ತರಃ**

**ಪ್ರಶ್ನೆ 41)** ಇದೇ ಸಾಕ್ಷಿ ಮುಂದುವರೆದು " ದಿಃ 25.10.2024 ರಂದು ಮೃತ ರಮೇಶ ಮತ್ತು 1 ನೇ ಆರೋಪಿಯ ರಕ್ತದ ಮಾದರಿಗಳನ್ನು ಧಾರವಾಡದ ಜಿಲ್ಲಾ ಆಸ್ಪತ್ರೆಯಿಂದ ಪಡೆದು ದಿಃ 28.10.2024 ರಂದು ರಾಸಾಯನಿಕ ಪರಿಕ್ಷೆಗಾಗಿ ಆರ್ ಎಫ್ ಎಸ್ ಎಲ್ ಬೆಳಗಾವಿಗೆ ಕಳುಹಿಸಿದೆನು . " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?

**ಉತ್ತರಃ**

**ಪ್ರಶ್ನೆ 42)** ಇದೇ ಸಾಕ್ಷಿ ಮುಂದುವರೆದು " ದಿಃ 29.10.2024 ರಂದು ಪ್ರಕರಣದಲ್ಲಿ ಗಾಯಗೊಂಡಿದ್ದ ಪೃಥ್ವಿ ಹಂಚಿನಮನಿ ಇವರು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಮರಣ ಹೊಂದಿರುವುದಾಗಿ ಮಾಹಿತಿ ಬಂದ ಮೇರೆಗೆ ಚಾಸಾ-29 ರವರಿಗೆ ಒಂದು ಜ್ಞಾಪನಾ ಕೊಟ್ಟು ಮೃತರ ಶವ ಪಂಚನಾಮೆ ಮಾಡಿ ನಂತರ ವರದಿ ಮಾಡುವಂತೆ ತಿಳಿಸಿದೆನು . " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?

**ಉತ್ತರಃ**

**ಪ್ರಶ್ನೆ 43)** ಇದೇ ಸಾಕ್ಷಿ ಮುಂದುವರೆದು " ಆ ಪ್ರಕಾರ ಚಾಸಾ-29 ರವರು ಪಂಚರಾದ ಮೃತ ಪೃಥ್ವಿ ಹಂಚಿನಮನಿ ಇವರ ಶವ ಪಂಚನಾಮೆಯನ್ನು ಮಾಡಿ ಪೋಟೋ ತೆಗೆಯಿಸಿ ವರದಿ ಮಾಡಿದರು . " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆ 44)** ಇದೇ ಸಾಕ್ಷಿ ಮುಂದುವರೆದು " ಅದೇ ದಿನ ಚಾಸಾ-20 ರವರಿಂದ ಭಾರತೀಯ ಸಾಕ್ಷ್ಯ ಅಧಿನಿಯಮದಡಿಯಲ್ಲಿ ಪ್ರಮಾಣ ಪತ್ರ ಪಡೆದು ಕಡತಕ್ಕೆ ಅಳವಡಿಸಿಕೊಂಡೆನು . ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?

**ಉತ್ತರಃ**

**ಪ್ರಶ್ನೆ 45)** ಇದೇ ಸಾಕ್ಷಿ ಮುಂದುವರೆದು " ದಿಃ 04.11.2024 ರಂದು ಚಾಸಾ-17 ನೀಲವ್ವರವರು ಪ್ರಮಾಣ ಪತ್ರದೊಂದಿಗೆ ನನ್ನ ಮುಂದೆ ಹಾಜರಾದರು . ಅವರಿಗೆ ಮೋಟಾರು ವಾಹನ ಕಾಯ್ದೆ ಕಲಂ 133 ರನ್ವಯ ನೋಟಿಸ ನೀಡಿ , ಉತ್ತರ ಹಾಗೂ ವಾಹನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪಡೆದು ಸದರಿಯವರ ವಶಕ್ಕೆ ಬಿಟ್ಟುಕೊಟ್ಟೆನು . " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?

**ಉತ್ತರಃ**

**ಪ್ರಶ್ನೆ 46)** ಇದೇ ಸಾಕ್ಷಿ ಮುಂದುವರೆದು " ದಿಃ 08.11.2024 ರಂದು ಸದರಿ ಪ್ರಕರಣದಲ್ಲಿ ತನಿಖೆ ಕಾಲಕ್ಕೆ ಚಿತ್ರಿಕರಿಸಿದ ಮೂರು ಡಿವಿಡಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದೆನು . " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?

**ಉತ್ತರಃ**

**ಪ್ರಶ್ನೆ 47)** ಇದೇ ಸಾಕ್ಷಿ ಮುಂದುವರೆದು " ಅದೇ ದಿನ ಮೃತ ಮರೆವ್ವ , ಪ್ರಣವ ಮತ್ತು ಪೃಥ್ವಿ ಇವರ ಮರಣೋತ್ತರ ಪರೀಕ್ಷಾ ವರದಿಗಳನ್ನು ಚಾಸಾ-24 ಶ್ಯಾಮಲಾರವರಿಂದ ಪಡೆದು ಕಡತಕ್ಕೆ ಅಳವಡಿಸಿದೆನು . " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?

**ಉತ್ತರಃ**

**ಪ್ರಶ್ನೆ 48)** ಇದೇ ಸಾಕ್ಷಿ ಮುಂದುವರೆದು " ದಿಃ 06.12.2024 ರಂದು ಚಾಸಾ-19 ರವರಿಂದ ಎಂ ವಿ ವರದಿ ಪಡೆದು ಅದೇ ದಿನ ಆರ್ ಎಫ್ ಎಸ್ ಎಲ್ ಬೆಳಗಾವಿ ಇವರಿಂದ ಬಂದ ವರದಿ ಪಡೆದು ಸದರಿ ದಾಖಲೆಗಳ ಅಡಿಯಲ್ಲಿ ಆರೋಪಿಯ ಕುರಿತಾದ ಪ್ರಮಾಣ ಪತ್ರಕ್ಕೆಸ ಸಂಬಂಧಪಟ್ಟಂತೆ ವೈದ್ಯರ ಅಭಿಪ್ರಾಯ ಪಡೆದು ಕಡತಕ್ಕೆ ಅಳವಡಿಸಿದೆನು ." ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?

**ಉತ್ತರಃ**

**ಪ್ರಶ್ನೆ 49)** ಇದೇ ಸಾಕ್ಷಿ ಮುಂದುವರೆದು " ಅದೇ ದಿನ ಮೃತ ರಮೇಶ ಹಂಚಿನಮನಿ ಇವರ ದಿನ ಆರ್ ಎಫ್ ಎಸ್ ಎಲ್ ಬೆಳಗಾವಿ ಇವರಿಂದ ವರದಿ ಪಡೆದು ಚಾಸಾ-23 ಸತೀಶ ರವರಿಗೆ ಅಭಿಪ್ರಾಯಕ್ಕಾಗಿ ಕಳುಹಿಸಿದ್ದು ಅವರಿಂದ ಅಭಿಪ್ರಾಯ ಪಡೆದು ಕಡತಕ್ಕೆ ಅಳವಡಿಸಿದೆನು " ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?

**ಉತ್ತರಃ**

**ಪ್ರಶ್ನೆ 50)** ಇದೇ ಸಾಕ್ಷಿ ಮುಂದುವರೆದು " ತನಿಖೆ ಮುಕ್ತಾಯಗೊಂಡಿದ್ದರಿಂದ ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದ ಹಿನ್ನಲೆಯಲ್ಲಿ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದೆನು ." ಎಂದು ಸಾಕ್ಷಿ ನುಡಿದಿರುತ್ತಾರೆ. ನಿವೇನು ಹೇಳುತ್ತೀರಿ ?

**ಉತ್ತರಃ**

ಸಿಸಿ ನಂ. 170/2025

**ಪ್ರಶ್ನೆ 21)** ನಿಮ್ಮ ವಿರುದ್ದದ ಪ್ರಕರಣದ ಕುರಿತು ನ್ಯಾಯಾಲಯಕ್ಕೆ ನೀವೇನಾದರೂ ಹೇಳುವುದು ಇದೆಯೇ?
**ಉತ್ತರಃ**

**ಪ್ರಶ್ನೆ 52)** ನಿಮ್ಮ ಪರ ಸಾಕ್ಷ್ಯ ಇದೆಯೇ?
**ಉತ್ತರಃ**

**ಸಹಿ/-**

ಧಾರವಾಡ
ದಿನಾಂಕಃ 19-01-2026

ಪ್ರಧಾನ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಧಾರವಾಡ